ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ದರೋಡೆ ಪ್ರಕರಣಗಳು

1737 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಜನವರಿ 1997 ರಿಂದ ಜೂನ್ 1997ರ ವರೆಗೆ ಎಷ್ಟು ದರೋಡೆ, ಸರಗಳ್ಳತನ ಅಪಹರಣ ಪ್ರಕರಣಗಳು ವರದಿಯಾಗಿವೆ?

ಆ) ಇವುಗಳ ಪೈಕಿ, ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ?

ಇ) ಈ ಪ್ರಕರಣಗಳನ್ನು ಹತೋಟಿಗೆ ತರಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಆರ್ ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಜನವರಿ 1997 ರಿಂದ ಜೂನ್ 1997ರವರೆಗೆ ಬೆಂಗಳೂರು ನಗರದಲ್ಲಿ ವರದಿಯಾದ ದರೋಡೆ, ಸರಗಳ್ಳತನ, ಅಪಹರಣ ಪ್ರಕರಣಗಳ ವಿವರ ಕೆಳಕಂಡಂತಿವೆ :

ದರೋಡೆ	:	20 ಪ್ರಕರಣಗಳು
ಸರಗಳ್ಳತನ	:	105 -" -
ಅಪಹರಣ	:	96 -" -

ಆ) ಪತ್ತೆಯಾದ ಪ್ರಕರಣಗಳ ವಿವರ ಕೆಳಕಂಡಂತಿವೆ :

ದರೋಡೆ	:	12 ಪ್ರಕರಣಗಳು
ಸರಗಳ್ಳತನ	:	35 -" -
ಅಪಹರಣ	:	78 -" -

ಇ) ಪ್ರಕರಣಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ :

1. ಹಗಲು-ರಾತ್ರಿ ಗಸ್ತನ್ನು ಬಿಗಿಗೊಳಿಸಲಾಗಿದೆ.
2. ಅಪಹರಣ ಭಯವಿರುವ ವ್ಯಕ್ತಿಗಳಿಗೆ ಸೂಕ್ತ ಪೋಲೀಸ್ ರಕ್ಷಣೆಯನ್ನು ನೀಡಲಾಗುತ್ತಿದೆ.
3. ಕರ್ತವ್ಯದ ಮೇಲಿರುವ ಪೋಲೀಸ್ ಸಿಬ್ಬಂದಿಗೆ ಅನುಮಾನಾಸ್ಪದ ಅಪರಿಚಿತರ ಮತ್ತು ವಾಹನಗಳನ್ನು ಅನುಮಾನಾಸ್ಪದವಾಗಿ ಓಡಿಸುತ್ತಿರುವವರ ಮೇಲೆ ತೀವ್ರ ನಿಗಾ ಇಡಲು ಸೂಚಿಸಲಾಗಿದೆ.
4. ಡಕಾಯಿತ ಪ್ರತಿಬಂಧಕ ದಳವನ್ನು ಸಿದ್ಧಪಡಿಸಿ ಅದನ್ನು ದರೋಡೆಗಳನ್ನು ತಡೆಗಟ್ಟುವ ಕಾರ್ಯ ಪ್ರವೃತ್ತಿಗೆ ಒಳಪಡಿಸಲಾಗಿದೆ.

5. ಅಪಹರಣ ಅಥವಾ ಸರಗಳ್ಳತನ ಆದ ಕೂಡಲೇ ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಅತಿ ಜರೂರಾಗಿ ಮಾಹಿತಿ ನೀಡುವಂತೆ ನಿಯಂತ್ರಣ ಕೊಠಡಿಯನ್ನು ಚುರುಕುಗೊಳಿಸಲಾಗಿದೆ.

6. ಬೆಂಗಳೂರು ನಗರದಲ್ಲಿ50 ಮೊಬೈಲ್ ವಾಹನಗಳು ದಿನಾಂಕ :26-7-97 ರಿಂದ ಹಗಲು-ರಾತ್ರಿ ಗಸ್ತುತಿರುಗುತ್ತಿದ್ದು ಅಪಹರಣ, ಸರಗಳ್ಳತನಗಳನ್ನು ತಡೆಗಟ್ಟಲು ಮತ್ತು ರೌಡಿಗಳನ್ನು ನಿಯಂತ್ರಿಸಲು ಹಾಗೂ ಇತರ ಚಟುವಟಿಕೆಗಳ ಮೇಲೆ ಸದಾ ನಿಗಾ ಇಡಲು ಜಾಗೃತವಾಗಿರುತ್ತವೆ.

ಸ್ವಾತಂತ್ಯದ ಸ್ವರ್ಣ ಮಹೋತ್ಸವದಲ್ಲಿ ಖೈದಿಗಳ ಬಿಡುಗಡೆ

1738 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಾರಾಗೃಹ, ಗಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಾತಂತ್ರೋತ್ಸವ ಸ್ವರ್ಣ ಮಹೋತ್ಸವದ ಸಂಧರ್ಭದಲ್ಲಿ ಸರ್ಕಾರವು ಖೈದಿಗಳನ್ನು ಬಿಡುಗಡೆ ಮಾಡಲು ನಿರ್ಧರಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಜನ ಖೈದಿಗಳನ್ನು ಬಿಡುಗಡೆ ಮಾಡಲಾಗುವುದು?

ಇ) ವಿಚಾರಣಾಧೀನ ಬಂದಿಗಳ ಪೈಕಿ ಎಷ್ಟು ಜನರನ್ನು ಈ ಸಂಧರ್ಭದಲ್ಲಿ ಬಿಡುಗಡೆ ಮಾಡಲಾಗುವುದು?

ಈ) ಬಿಡುಗಡೆ ಖೈದಿಗಳಿಗೆ ಈ ಸಂಧರ್ಭದಲ್ಲಿ ಸರ್ಕಾರದಿಂದ ಉದ್ಯೋಗ ಕೈಗೊಳ್ಳುವುದಕ್ಕೆ ಧನ ಸಹಾಯ ನೀಡುವುದೇ?

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :

ಅ) ಪರಿಶೀಲಿಸಲಾಗುತ್ತಿದೆ.

ಆ) 12 ವರ್ಷ ವಾಸ್ತವಿಕ ಸಜೆಯನ್ನು ಅನುಭವಿಸಿದ 37 ಜನ ಜೀವಾವಧಿ ಖೈದಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಯಾರೂ ಇಲ್ಲ

ಈ) ಇಲ್ಲ